ಮುಹಮ್ಮದ್ ಯೂನುಸ್ ಸಾರವಾನ್

# ಪ್ರತಿಮೆ



ಒಂದು ಊರಿನ ನಾಲ್ಕು ರಸ್ತೆಗಳು ಸಂಧಿಸುವ ಒಂದು ವೃತ್ತ ಅದು. ಸತ್ತ ಜಿರಲೆಯನ್ನು ಇರುವೆಗಳು ಮುಕ್ಕುವಂತೆ ಯಾವತ್ತೂ ಗಿಜಿಗಿಡುವ ಜನಸಂದಣಿ. ತಮ್ಮ ತಮ್ಮ ವ್ಯಾಪಾರ ವ್ಯವಹಾರದಲ್ಲಿ ತನ್ಮಯರಾಗಿರುವ ಜನ ಒಂದೆಡೆಯಾದರೆ, ಕೆಲಸ ಕಾರ್ಯಗಳ ನಿಮಿತ್ತ ಅತ್ತಿಂದಿತ್ತ ಸುಳಿದಾಳುವ ಜನರ ಇನ್ನೊಂದು ಗುಂಪು ಇನ್ನೊಂದು ಕಡೆ. ಆ ಗೋಜು ಗದ್ದಲದ ನಡುವೆ ನಿಶ್ಶಬ್ದ ಮತ್ತು ನಿಶ್ಚಲವಾಗಿ ನಿಂತಿದೆ ಆ ಪ್ರತಿಮೆ.

ಆ ಪ್ರತಿಮೆಗೆ ಇರುವ ಹೆಸರಿನಿಂದಲೇ ಆ ವೃತ್ತ ಗುರುತಿಸಿಕೊಂಡಿದೆ. ಆದರೆ ಆ ಹೆಸರ ಹಿಂದಿನ ಇತಿಹಾಸ ಹುಡುಕಲು ಯಾರೂ ಹೋಗಿಲ್ಲ. ವಾಸ್ತವದಲ್ಲಿ ಬದುಕುವ ಅವರಿಗೆ ಅದರ ಅವಶ್ಯಕತೆಯಿಲ್ಲ. ಶತಮಾನಗಳಿಂದ ಶಿಲಾರೂಪತಾಳಿ ನಿಂತ ಅದರ ಇತಿಹಾಸ ವಿವರಿಸಲು ಅಲ್ಲಿ ಹಳೇ ತಲೆಮಾರಿನ ಯಾವ ತಲೆಯೂ ಆ ಊರಿನಲ್ಲಿ ಜೀವಂತವಾಗಿ ಇರಲಿಲ್ಲ. ತನ್ನ ಅಸ್ತಿತ್ವವನ್ನೇ ದಾಖಲಿಸಲಾಗದ ಆ ಪ್ರತಿಮೆಯ ಮೇಲೆ ವಾಹನಗಳಿಂದೆದ್ದ ದೂಳು ಒಂದಿಂಚು ಮೆತ್ತಿತ್ತು. ಹಾರಾಡುವ ಹಕ್ಕಿಗಳೆಲ್ಲ ಆ ಪ್ರತಿಮೆಯ ಮೇಲೆ ಕೂತು ವಿಶ್ರಮಿಸಿ ಹಿಕ್ಕೆ ಹಾಕುವುದರಿಂದ ಅದರ ಮೂಲ ಸ್ವರೂಪ ಬದಲಾಗಿತ್ತು. ಅದರ ಮೇಲಿನ ಕಪ್ಪು ಬಿಳಿ ಬಣ್ಣದ ಚಿತ್ತಾರ – ಮಕ್ಕಳು ಬರೆದಂತಿತ್ತು. ಯಾರಾದರೂ ಅದನ್ನು ಯಾವುದಾದರೂ ಸಂದರ್ಭದಲ್ಲಿ